ಹಿಂಬಾಲಿಸಿಕೊಂಡು ಬಂದಿತ್ತು ಗುಂಪು.

"ಸುಮ್ನೆ ಯಾಕೆ ತೊಂದ್ರೆ ತಗೋತೀರಿ? ಇನ್ನೊಂದು ಸಲ ನೋಡೋಣ..." ಎನ್ನುವ ಸೌಜನ್ಯದ ಮಾತು ತುದಿನಾಲಿಗೆಯದ್ದಾಗಿತ್ತು, ತನ್ನ ಮಟ್ಟಿಗಂತೂ...

ಚಟಪಟ ಕಿಡಿ ಕಾರುತ್ತಾ ಒಲೆಯೊಳಗೆ ಉರಿಯುತ್ತಿತ್ತು ಸಣ್ಣ ಕುಂಟೆ. ಹಂಡೆಯ ನೀರು ಹದವಾಗಿ ಕಾದಿತ್ತು.

"ಸ್ನಾನಾನೇ ಮಾಡಿಬಿಡ್ಬೋದಿತ್ತು..." ಅಂದಿದ್ದಳು ರೋಹಿಣಿ ಸಮೃದ್ಧ ಬಿಸಿನೀರಿಗೆ ಮಾರು ಹೋಗಿ. ಜೊತೆಗಾರ್ತಿಯರಿಬ್ಬರು ಪರಸ್ಪರ ಮುಖ ನೋಡಿಕೊಂಡು ನಕ್ಕಿದ್ದರು. "ನೋಡಿದ್ರೆ ಇಲ್ಲೇ ಟೆಂಟು ಹಾಕೋ ಹಾಗೆ ಕಾಣುತ್ತೆ..." ಕಿಚಾಯಿಸಿದ್ದರು. 'ಯಾಕಾಗಬಾರದು?' ಅನ್ನಿಸಿತೇ ಒಳಮನಸ್ಸಿಗೆ? ಒಂದೇ ಒಂದು ದಿನ ನೋಡಿದ್ದ ಚಂದ್ರು ಅಷ್ಟು ಮೋಡಿ ಮಾಡಿದ್ದನೇ? ಮೊನ್ನೆ ಇಷ್ಟು ಹೊತ್ತಿಗೆ ಅವನು ಯಾರೋ, ನಾನು ಯಾರೋ. ನಿನ್ನೆ ಇಷ್ಟು ಹೊತ್ತಿಗೆ, ಹೌದು, ನಿನ್ನೆ ಇದೇ ಹೊತ್ತಿಗೆ ಚಂದ್ರುವನ್ನು ಮೊಟ್ಟಮೊದಲ ಬಾರಿ ನೋಡಿದ್ದು. ಸಿಟಿಯಿಂದ ಮಿನಿ ಬಸ್ಸಿನಲ್ಲಿ ಬಂದಿಳಿದವರನ್ನು ಸ್ವಾಗತಿಸಿದವರಲ್ಲಿ ಅವನೂ ಒಬ್ಬ. ಹೊಸಬರೆಂಬ ಮುಜುಗರವಿಲ್ಲದೆ ಸರಸವಾಗಿ ಮಾತಾಡುತ್ತಾ ಬೇಕು ಬೇಡಗಳನ್ನು ಗಮನಿಸಿದ ಚಂದದ ಯುವಕ ಅರಿವಿಗೆ ಬರುವ ಮುನ್ನವೇ ಆಪ್ತನಾಗತೊಡಗಿದ್ದ. ಪ್ರಾಯದ ಸೆಳೆತ. ಪರಸ್ಪರ ಆಕರ್ಷಣೆಗೆ ಕಾರಣಗಳ ಹಂಗಿರುವುದಿಲ್ಲ ಅನ್ನುವಂತೆ ಚಂದ್ರು ಕೂಡಾ ಬಳಕೆಯಾದ ಕೆಲವೇ ಹೊತ್ತಿನಲ್ಲಿ ತನ್ನ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿರುವಂತೆನಿಸಿದ್ದು ತನ್ನ ಭ್ರಮೆಯಂತೂ ಆಗಿರಲಿಲ್ಲ ಅನ್ನುವುದು ನಂತರ ಗೊತ್ತಾದ ಸತ್ಯ.

ಕೈಕಾಲು ತೊಳೆದ ಜೊತೆಗಾರ್ತಿಯರು ಇನ್ನಿತರರ ಜೊತೆ ಕುರ್ಚಿಯ ಮೇಲೆ ಆಸೀನರಾಗಿ ಪಟ್ಟಾಂಗಕ್ಕೆ ಕೂತರೆ ತಾನು ಮಾತ್ರಾ ಅಡುಗೆಮನೆ ಹೊಕ್ಕು,

"ಏನಾದ್ರೂ ಸಹಾಯ ಮಾಡ್ಲಾ ಅಮ್ಮಾ?" ಕೇಳಿದ್ದಳು ರೋಹಿಣಿ. ಹಳೆಗಾಲದ ಅಡುಗೆಮನೆ. ಕರಿ ಹಿಡಿದು ಮಸುಕಾದ ಗೋಡೆಗಳು. ಸಣ್ಣ ಕಿಟಕಿಯಿಂದ ಪ್ರಯಾಸಪಟ್ಟು ತೂರಿ ಬರುತ್ತಿದ್ದ ಚೌಕಾಶಿ ಬೆಳಕು. ಒಳಗೆಲ್ಲಾ ತುಂಬಿಕೊಂಡಿದ್ದ ಏಲಕ್ಕಿಯ ನರುಗಂಪು ಅಲ್ಲಿಂದ ಕಾಲ್ಕೀಳದೆ ಅಲ್ಲೇ ಸುಳಿದಾಡಿಕೊಂಡಿದ್ದನ್ನು ಆಘ್ರಾಣಿಸುತ್ತಾ ನೆಲದ ಮೇಲೆ ಕೂತು ಸೌದೆ ಉರಿಸಿ ಅಡುಗೆ ಮಾಡುವ ಕ್ರಮವನ್ನು ಕುತೂಹಲದಿಂದ ಗಮನಿಸಿದ್ದಳು ರೋಹಿಣಿ. ಯಶೋದಮ್ಮನಿಗೆ ಮುಜುಗರ. "ಎಲ್ಲಾ ಆಗ್ಹೋಗಿದೆ. ತಿಂಡಿಗೆ ಕೂರೋದೇ ಬಾಕಿ..." ಬಾಳೆಲೆ ಸಿಗುಳು ವರೆಸುತ್ತಿದ್ದ ಚಂದ್ರು ಅವಳಿಗೆ ಉತ್ತರಿಸಿದ್ದ. ಅಮ್ಮನಿಗೆ ಅವನು ಸಹಾಯ ಮಾಡುತ್ತಿರುವ ರೀತಿಯನ್ನು ಕಂಡು ಮೆಚ್ಚುಗೆ ಅನಿಸಿತ್ತು ರೋಹಿಣಿಗೆ. ಎಲ್ಲರಿಗೂ ಕೂರಲು ಸಾಲಾಗಿ ಮಣೆ ಇಟ್ಟು, ಎದುರು ಬಾಳೆಲೆ ಹಾಕಿ, ಅವನು ಎಲೆಯೆದುರಿಗಿಟ್ಟ ಲೋಟಕ್ಕೆ ನೀರು ತುಂಬಿಸಿದ್ದಳು ರೋಹಿಣಿ. "ನಮ್ಮಲ್ಲಿ ನೀರು ಕುಡಿಯೋ ಪಂಚಾತಿಕೇನೇ ಇಲ್ಲ. ಬಾಯಾರ್ಕೆ ಆದರೆ ಕಾಫಿ. ಮಾತ್ರೆ ನುಂಗೋಕೂ ಕಾಫೀನೇ.." ನಗೆಯಾಡಿದ್ದ ಚಂದ್ರು.

"ಹೌದಾ? ಅಷ್ಟೊಂದು ಕಾಫಿ ಕುಡೀತೀರಾ? ಏನಾಗಲ್ವಾ?" ಕೇಳಿದ್ದಳು ರೋಹಿಣಿ ಕಣ್ಣರಳಿಸಿ.

"ನೋಡ್ತಿದೀರಲ್ಲ ಹವಾ. ಕಾಫಿ ಅಂತ ಹೆಸರಿಗೆ. ಕುದಿಸಿದ ಬೆಲ್ಲದ ನೀರಿಗೆ ಚೂರೇ ಪುಡಿ, ಜಾಸ್ತಿ ಹಾಲು..." ವಿವರಿಸಿದ್ದ ಚಂದ್ರು.

"ಓ..."

"ಬನ್ರಪ್ಪಾ ತಿಂಡಿಗೆ. ರೆಡೀ ಇದೆ..." ತಾನೇ ಮುಂದಾಗಿ ಹೋಗಿ ಜೊತೆಗೆ ಬಂದ ಆರೇಳು ಮಂದಿಯನ್ನು ಆಹ್ವಾನಿಸಿದ್ದಳು ರೋಹಿಣಿ. ಮಾತಲ್ಲಿ ಮುಳುಗಿ ಹೋದವರು ಅವಳನ್ನು ಕೌತುಕದಿಂದ ಗಮನಿಸಿದ್ದರು.